**ಓ ಎಸ್ ನಂ. 46/2024**
**ಡಿ ಡಬ್ಲ್ಯೂ: 02**

**ದಿ: 27-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀ ಎಂ ಎಸ್ ಡಿ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ.

**ಪಾಟೀ ಸವಾಲು: ಶ್ರೀ ಎಸ್ ಆರ್ ಎಚ್ ವಕೀಲರಿಂದ:**

1ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ. 3ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಪಾರ್ವತೆವ್ವನ ಮಕ್ಕಳು ದಾವೆ ಸಲ್ಲಿಸಿದ್ದಾರೆ. ಪಾರ್ವತೆವ್ವನಿಗೆ ಈ ಹಿಂದೆ ಹಿರಿಯರ ಸಮಕ್ಷಮ ಹಣ, ಬಂಗಾರ ಕೊಟ್ಟಿರುತ್ತಾರೆ. ಈ ಬಗ್ಗೆ ಯಾವುದೆ ಬರವಣಿಗೆ ಇರುವುದಿಲ್ಲ. ಎಷ್ಟು ಹಣ, ಬಂಗಾರ ಕೊಟ್ಟಿದ್ದಾರೆ ನೆನಪಿಲ್ಲ. ನಾನು ಪ್ರತಿವಾದಿ ಮಾತು ಕೇಳಿ 1ನೇ ವಾದಿಯ ತಾಯಿ ಹಾಗೂ 2 ರಿಂದ 4 ನೇ ವಾದಿಯರಿಗೆ ಪ್ರತಿವಾದಿಯರು ಹಣ ಹಾಗೂ ಬಂಗಾರ ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.